| | | |
|---|---|---|
| OS | 206/2022 | ಪಿ.ಡಬ್ಲ್ಯೂ: 3 |

ಇಂದು ದಿ: 25.06.2025. ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ವಾದಿಪರ ಶ್ರೀ ಬಿ ಎಂ ಎಸ್ ವಕೀಲರಿಂದ:

ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣಪತ್ರ ಸಲ್ಲಿಸಿದ್ದು ಅದರಲ್ಲಿ ಹೇಳಿರುವ ವಿಚಾರಗಳು ಸತ್ಯವಾಗಿದ್ದು, ನಾನೇ ಹೇಳಿ ಬರೆಸಿರುತ್ತೇನೆ.

ಪಾಟೀ ಸವಾಲು: ಶ್ರೀ ಎಂ ಜಿ ಎಸ್ ವಕೀಲರಿಂದ.

ನಾನು ವಾದಿಯ ಗ್ರಾಮದವನು. ವಾದಿಯರು ಮತ್ತು ನಾವೆಲ್ಲ ಒಂದೇ ಗ್ರಾಮದವರು ಮತ್ತು ಹುಟ್ಟಿದಾಗಿನಿಂದ ಪರಿಚಯಸ್ಥರು. ಹೊಸಕಡಜಟ್ಟಿ ಗ್ರಾಮದಿಂದ ಹರಿಯೂರಿಗೆ ಅರ್ಧ ಫರ್ಲಾಂಗ ಅಂತರ ಇದೆ. ನಾನು ಹರಿಯೂರು ಗ್ರಾಮದ ಸರ್ವೆ ನಂ.95 ರ ಕುರಿತಂತೆ ಸಾಕ್ಷಿ ನುಡಿಯಲು ಬಂದಿದ್ದೇನೆ. ಸರ್ವೆ ನಂ.95 ಒಟ್ಟು ಎಷ್ಟು ವಿಸ್ತೀರ್ಣ ಇದೆ ಎಂದು ನನಗೆ ಗೊತ್ತಿಲ್ಲ. ದಾವಾ ಜಮೀನು ನಮ್ಮ ಜಮೀನಿನ ಸರ್ವೆ ನಂ.44ರ ಪಕ್ಕದಲ್ಲಿದೆ. ಅದರಲ್ಲಿ ಒಟ್ಟು 3 ಎಕರೆ 30 ಗುಂಟೆ ಇದ್ದು ಅದು ನಮ್ಮ ಪಿತ್ರಾರ್ಜಿತ ಆಸ್ತಿ. ದಾವಾ ಆಸ್ತಿ ಒಟ್ಟು 2 ಎಕರೆ 20 ಗುಂಟೆ ಇದೆ ಎಂದು ಹೇಳುತ್ತಿದ್ದಾರೆ ಅಳತೆಯಾದಾಗ ನಾನು ಜಮೀನು ಪಕ್ಕ ಇದ್ದೆ. ಅಳತೆಗೆ ಅರ್ಜಿ ಕೊಟ್ಟವರು ಯಾರು ಎಂದು ನನಗೆ ಗೊತ್ತಿಲ್ಲ. ದಾವಾ ಜಮೀನಿನ ದಾಖಲೆಯನ್ನು ನಾನು ನೋಡಿಲ್ಲ. ದಾವೆಯನ್ನು ವಾದಿಗಳು ಏಕೆ ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. ವಾದಿಗಳಿಗೆ ದಾವಾ ಆಸ್ತಿಗಳು ಯಾವ ಜಮೀನಿನ ದಾಖಲೆಗಳ ಆಧಾರದಲ್ಲಿ ಬಂತು ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ.95 4 ಎಕರೆ ಆಸ್ತಿ ಇದ್ದು ಅದರಲ್ಲಿ 1 ಎಕರೆ 20 ಗುಂಟೆ ಭೂ ಸುಧಾರಣೆಗೆ ಹೋಗಿದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಜಮೀನಿನ ಅಕ್ಕಪಕ್ಕ ನನಗೆ ಜಮೀನು ಇಲ್ಲದ ಕಾರಣ ಯಾರಿಗೆ ಗೇಣಿಗೆ ಹೋಗಿದೆ ಎಂದರೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಿಜ ವಿಚಾರ ತಿಳಿಯದಿದ್ದರೂ ಸಹ ನಾನು 2ನೇ ವಾದಿ ಹೇಳಿಕೊಟ್ಟಷ್ಟು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯ ತಮ್ಮ ಮತ್ತು ತಮ್ಮನ ತಾಯಿಯನ್ನು ನಾನು ನೋಡಿಲ್ಲ.

ಕೋಟಪ್ಪರವರಿಗೆ ಸರ್ವೆ ನಂ.95ರ ಜಮೀನಿನ ಸ್ವಲ್ಪ ದೂರದಲ್ಲಿ ಇನ್ನೊಂದು ಜಮೀನು ಇದೆ. ಅದನ್ನೂ ಸಹ ಕೋಟಪ್ಪರವರು ವ್ಯವಸಾಯ ಮಾಡುತ್ತಿದ್ದಾರೆ. ದಾವಾ ಜಮೀನಿಗೂ ಕೋಟಪ್ಪರವರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. 1 ಮತ್ತು 2ನೇ ವಾದಿ ಹೇಳಿಕೊಟ್ಟಷ್ಟು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ನಂಜನಗೂಡು.